**ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆ ಸಂಖ್ಯೆ 106ಕ್ಕೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ**

---

**ಸೂಚನೆ:-**

**2020-21 ನೇ ಸಾಲಿನ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಉಡುಪಿ ಜಿಲ್ಲೆಯ ಫಲಾನುಭವಿಯಾದ ಜ್ಯೋತಿ ಕೋಂ ಜನಾರ್ಧನ ಸುವರ್ಣ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರಿಗೆ ದೋಣಿ ನಿರ್ಮಾಣದ ಕೆಲಸ ಪೂರ್ಣವಾಗಿದ್ದರೂ ಎರಡು ವರ್ಷದಿಂದ ಸಬ್ಸಿಡಿ ಮೊತ್ತ ಬಿಡುಗಡೆಗೆ ವಿಳಂಬ ಮಾಡುತ್ತಿರುವ ಕುರಿತು.**

**ಹೇಳಿಕೆ:-**

- 2020-21ನೇ ಸಾಲಿನ ಪಿ.ಎಂ.ಎಂ.ಎಸ್.ವೈ ಯೋಜನೆಯಡಿ, ಲಾಂಗ್ ಲೈನ್ ಗಿಲ್ ನೆಟ್ ಆಳಸಮುದ್ರ ದೋಣಿ ನಿರ್ಮಿಸಲು ಸಹಾಯಧನ ಯೋಜನೆಯಡಿ ಘಟಕ ವೆಚ್ಚ ರೂ.120.00 ಲಕ್ಷಕ್ಕೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ 40 ರಷ್ಟು, ಮಹಿಳಾ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ 60 ರಷ್ಟು ಸಹಾಯಧನ ನೀಡಲು ಅವಕಾಶವಿದೆ. ಶ್ರೀಮತಿ ಜ್ಯೋತಿ ಕೋಂ ಜನಾರ್ಧನ ಸುವರ್ಣ 6-144, 'ಗೀತಾ ನಿವಾಸ', ಕುದ್ರುಕೆರೆ, ಪಡುಕೆರೆ, ಮಲ್ಪೆ, ಉಡುಪಿ ರವರು ಸಲ್ಲಿಸಿದ ಅರ್ಜಿಯು ದಿನಾಂಕ: 03/02/2021 ರಂದು ನಡೆದ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ.

- ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ರವರ ನಡವಳಿಗಳ ಆದೇಶ ಸಂಖ್ಯೆ: ಮೀನಿ/ಬಿಆರ್‌ಎಸ್/97/2020, ದಿನಾಂಕ:19/02/2021 ರಂತೆ ಶ್ರೀಮತಿ ಜ್ಯೋತಿ ಕೋಂ ಜನಾರ್ಧನ ಸುವರ್ಣರವರ ಹೆಸರಿಗೆ ಕೇಂದ್ರ ಸರ್ಕಾರದ ಯೋಜನೆಯ ಮಾರ್ಗಸೂಚಿಗಳಂತೆ ದೋಣಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿರುತ್ತದೆ.

- ಅರ್ಜಿದಾರರು ಯೋಜನೆಯಡಿ ಲಾಂಗ್ ಲೈನ್ / ಗಿಲ್ ನೆಟ್ ಆಳಸಮುದ್ರ ಮೀನುಗಾರಿಕೆ ದೋಣಿಯನ್ನು ಸ್ಟಾರ್ ಬೋಟ್ ಯಾರ್ಡ್ ಮಂಗಳೂರು ಇಲ್ಲಿ ನಿರ್ಮಾಣ ಮಾಡಿರುವುದಾಗಿ ತಿಳಿಸಿ, ಅರ್ಹ ಸಹಾಯಧನ ರೂ.72.00 ಲಕ್ಷಗಳನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ದಿನಾಂಕ: 05/03/2022 ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು ಉಡುಪಿ ರವರಿಗೆ ಸಲ್ಲಿಸಿರುತ್ತಾರೆ.

- IRDA ಸರ್ವೇಯರ್ ರವರು ದಿನಾಂಕ: 12.10.2022 ರಂದು ತಪಾಸಣಾ ಮತ್ತು Valuation ರಿಪೋರ್ಟ್ ಸಲ್ಲಿಸಿ, ತದನಂತರ ದಿನಾಂಕ: 08.01.2023 ರಂದು ಪತ್ರ ನೀಡಿ ದಿನಾಂಕ: 12/10/2022 ರ ವರದಿಯನ್ನು ತಮ್ಮ ಅವಗಾಹನೆಗೆ ತೆಗೆದುಕೊಳ್ಳಬೇ ಅದನ್ನು ವಾಪಸ್ ನೀಡಲು ಕೋರಿರುತ್ತಾರೆ. ತದನಂತರ ಅದೇ ಸರ್ವೇಯರ್ ದಿನಾಂಕ: 28.02.2023 ರಂದು ಪತ್ರ ನೀಡಿ ಕೆಲಸದ ಒತ್ತಡ ಹಾಗೂ ಗೊಂದಲದಿಂದಾಗಿ ದಿನಾಂಕ: 08/01/2023ರ ಪತ್ರದ ಹೇಳಿಕೆಯನ್ನು ನೀಡಿರುತ್ತೇವೆ ಎಂದು ತಿಳಿಸಿರುತ್ತಾರೆ.

- ಅನುಮೋದಿತ IRDA ಸರ್ವೇಯರ್ ಸಹ ಗೊಂದಲದ ಪತ್ರ ನೀಡಿರುವುದರಿಂದ ಸದರಿ ದೋಣಿಯ ನಿರ್ಮಾಣದ ಬಗ್ಗೆ ಅಧಿಕಾರಿಗಳ ತಂಡ ರಚಿಸಿ ಪರಿಶೀಲನಾ ವರದಿಯನ್ನು ಪಡೆದು ಮುಂದಿನ ಕ್ರಮವಹಿಸುವುದು ಸೂಕ್ತ ಎಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಉಡುಪಿ ರವರು ಕೋರಿರುವ ಹಿನ್ನೆಲೆಯಲ್ಲಿ ಮತ್ತು ಕೇಂದ್ರ ಕಚೇರಿಯ ಹಂತದಲ್ಲಿ ಜಂಟಿ ಪರಿಶೀಲನೆ ತಂಡ ರಚಿಸಿ ಪರಿಶೀಲನಾ ವರದಿಯನ್ನು ಪಡೆಯುವುದು ಸೂಕ್ತ ಎಂದು ಮೀನುಗಾರಿಕೆ ಜಂಟಿ ನಿರ್ದೇಶಕರು ದಿನಾಂಕ: 17/02/2023 ರಂದು ಕೋರಿರುತ್ತಾರೆ.

- ಅವರ ಕೋರಿಕೆಯಂತೆ ಕೇಂದ್ರ ಕಛೇರಿಯಿಂದ ಜಂಟಿ ನಿರ್ದೇಶಕರು (ಕರಾವಳಿ) ರವರ ನೇತೃತ್ವದಲ್ಲಿ ತಂಡ ರಚಿಸಿ ವರದಿ ನೀಡಲು ತಿಳಿಸಲಾಗಿದೆ. ಅದರಂತೆ ಸಮಿತಿಯು ದೋಣಿಯನ್ನು ದಿನಾಂಕ: 07/06/2023 ರಂದು ಪರಿಶೀಲಿಸಿ, ದೋಣಿಯು ಹಳೆಯದಾಗಿ ಕಂಡುಬಂದಿದ್ದು, ದೋಣಿಯಲ್ಲಿ ಅಳವಡಿಸಿರುವ ಇಂಜಿನ್ ಮತ್ತು ಇತರೆ ಉಪಕರಣಗಳು ಕೂಡ ತುಕ್ಕು ಹಿಡಿದಿರುವುದು ಕಂಡುಬಂದಿರುತ್ತದೆ. ದೋಣಿಯ ಕ್ಯಾಬಿನ್ ಸಹ ಕೆಲವು ಭಾಗಗಳಲ್ಲಿ ಹಾಳಾಗಿರುತ್ತದೆ, ದೋಣಿ ನಿರ್ಮಾಣದ ಸಮಯದಲ್ಲಿ ಹಂತವಾರು ನಿರ್ಮಾಣದ ಪ್ರಗತಿ ಬಗ್ಗೆ ದಾಖಲೆಗಳನ್ನು ಪರಿಶೀಲನೆ ವೇಳೆ ಹಾಜರುಪಡಿಸಿರುವುದಿಲ್ಲ, ಪಿಎಂಎಂಎಸ್‌ವೈ ಯೋಜನೆಯ ಮಾರ್ಗಸೂಚಿ ಯನ್ವಯ ಕಾರ್ಯಕ್ರಮ ಅನುಷ್ಠಾನವಾಗಿಲ್ಲದೆ ಹಾಗೂ ಪರಿಶೀಲನೆ ವೇಳೆ ಹಾಜರುಪಡಿಸಿದ ದೋಣಿಯು ಹಳೆಯದೆಂದು ಕಂಡುಬಂದಿರುತ್ತದೆ ಎಂದು ಛಾಯಾಚಿತ್ರಗಳೊಂದಿಗೆ ವರದಿ ನೀಡಿರುತ್ತಾರೆ.

- ಮೀನುಗಾರಿಕೆ ಸಹಾಯಕ ನಿರ್ದೇಶಕರು, ಉಡುಪಿರವರು ದಿನಾಂಕ: 05/03/2022 ಮತ್ತು 09/01/2023 ರಂದು ಡೀನ್, ಮೀನುಗಾರಿಕೆ ಮಹಾವಿದ್ಯಾಲಯ ಮಂಗಳೂರು ರವರಿಗೆ ಪತ್ರ ಬರೆದು ಸದರಿ ದೋಣಿಯನ್ನು ಪರಿಶೀಲಿಸಿ ವರದಿ ನೀಡಲು ಕೋರಿರುತ್ತಾರೆ.

- ದಿನಾಂಕ: 10.03.2022 ರಂದು ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರಿನ Department of Fisheries Engineering and Technology ಘಟಕದ ಮುಖ್ಯಸ್ಥರು ಮತ್ತು 3 ಜನ ಪ್ರಾಧ್ಯಾಪಕರ ತಂಡ ದೋಣಿಯನ್ನು ಪರಿಶೀಲಿಸಿ "After the inspection the team opined that on surface it was not newly constructed boat but the old boat was renovated" ಎಂದು ತಪಾಸಣೆ ವರದಿಯನ್ನು ದಿನಾಂಕ: 17/02/2023ರಲ್ಲಿ ನೀಡಿರುತ್ತಾರೆ.

- ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರಿನ Department of Fisheries Engineering and Technology ಘಟಕದ ಅಧಿಕಾರಿಗಳು ಹಾಗೂ ಕೇಂದ್ರ ಕಚೇರಿಯಿಂದ ರಚಿಸಿದ ತಂಡ ನೀಡಿದ ವರದಿಗಳನ್ನು ಪರಿಶೀಲಿಸಿ, ಫಲಾನುಭವಿಯು ಕೇಂದ್ರ ಪುರಸ್ಕೃತ ಪಿಎಂಎಂಎಸ್‌ವೈ ಯೋಜನೆಯ ಮಾರ್ಗಸೂಚಿಯಂತೆ ಹೊಸದಾಗಿ ಆಳಸಮುದ್ರ ಮೀನುಗಾರಿಕೆ ದೋಣಿಯನ್ನು ನಿರ್ಮಾಣ ಮಾಡದೇ ಹಳೆಯ ಬೋಟನ್ನು ನವೀಕರಣ ಮಾಡಿದ್ದು, ಯೋಜನೆಯ ಮಾರ್ಗಸೂಚಿಯಂತೆ ಫಲಾನುಭವಿಗೆ ಸಹಾಯಧನ ಬಿಡುಗಡೆ ಮಾಡಲು ಅವಕಾಶವಿಲ್ಲದ ಕಾರಣ

ಫಲಾನುಭವಿಗೆ ಸಹಾಯಧನ ಬಿಡುಗಡೆ ಮಾಡಲು ಅವಕಾಶವಿಲ್ಲವೆಂದು ಹಿಂಬರಹ ನೀಡುವಂತೆ ದಿನಾಂಕ: 24/08/2023 ರಂದು ಮೀನುಗಾರಿಕೆ ಜಂಟಿ ನಿರ್ದೇಶಕರು, ಉಡುಪಿ ಮತ್ತು ಮೀನುಗಾರಿಕೆ ಉಪ ನಿರ್ದೇಶಕರು, ಉಡುಪಿ ರವರಿಗೆ ಸೂಚಿಸಲಾಗಿರುತ್ತದೆ.

- ಅದರಂತೆ, ಮೀನುಗಾರಿಕೆ ಉಪ ನಿರ್ದೇಶಕರು, ಉಡುಪಿ ರವರು ದಿನಾಂಕ: 06-10-2023 ರಂದು ಅರ್ಜಿದಾರರಿಗೆ ಸಹಾಯಧನ ಬಿಡುಗಡೆ ಮಾಡಲು ಅವಕಾಶವಿಲ್ಲವೆಂದು ತಿಳಿಸಿ ಹಿಂಬರಹ ನೀಡಿರುತ್ತಾರೆ.

- ತದನಂತರ ಸದರಿ ಪ್ರಕರಣದ ಕುರಿತು ದಿನಾಂಕ: 29-02-2024 ರಂದು ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಅರ್ಜಿದಾರರಿಗೆ ಸಹಾಯಧನ ನೀಡುವ ಕುರಿತಂತೆ ದೋಣಿಯ ನಿರ್ಮಾಣದ ಕಾರ್ಯ ತೋರಿಸಲು ಹಲವು ಬಾರಿ ನೋಟೀಸ್ ನೀಡಿದ್ದರೂ ಸಹ ಅರ್ಜಿದಾರರು ಅದನ್ನು ತೋರಿಸದೆ, ದೋಣಿಯ ನಿರ್ಮಾಣ ಕಾರ್ಯದ ವಿವಿಧ ಹಂತಗಳ ಬಗ್ಗೆ ದಾಖಲಾತಿಗಳು ಇಲ್ಲದೆ ಇರುವುದರಿಂದ ಮತ್ತು ತನಿಖಾ ತಂಡಗಳಿಗೆ ತೋರಿಸಿದ ದೋಣಿಯು ಹಳೆಯ ದೋಣಿ ಎಂದು ಅಭಿಪ್ರಾಯಿಸಿರುವುದರಿಂದ ಸಹಾಯಧನ ನೀಡುವುದು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ 2020-21 ನೇ ಸಾಲಿನ ಪಿ.ಎಂ.ಎಂ.ಎಸ್.ವೈ. ಯೋಜನೆಯಡಿ ಅರ್ಜಿದಾರರಾದ ಶ್ರೀಮತಿ ಜ್ಯೋತಿ ಕೋಂ ಜನಾರ್ಧನ ಸುವರ್ಣ, ಉಡುಪಿ ಇವರಿಗೆ ಈ ಯೋಜನೆಯಡಿ ಸಹಾಯಧನ ನೀಡಲು ಸಾಧ್ಯವಿಲ್ಲ ಎಂದು ನಿರ್ಣಯಿಸಲಾಗಿರುತ್ತದೆ.

- ದಿನಾಂಕ: 29-02-2024 ರಂದು ಜರುಗಿದ ಸಭೆಯಲ್ಲಿ Natural Justice ಅಡಿ ಶ್ರೀಮತಿ ಜ್ಯೋತಿ ಕೋಂ ಜನಾರ್ಧನ ಸುವರ್ಣ ಇವರಿಗೆ ಬೋಟಿನ ನೋಂದಣಿ ಪತ್ರ ನೀಡಲು ನಿರ್ಣಯಿಸಲಾಗಿದ್ದು, ಅದರಂತೆ, ದಿನಾಂಕ: 04-04-2024 ರಂದು Real Craft ತಂತ್ರಾಂಶದಲ್ಲಿ "ಶ್ರೀ ಸಿಂಗಧೂರೇಶ್ವರಿ IND-KA-02-MM-6030 (04/04/2024) ಅನುಮೋದಿಸಿ, Reg Certificate No. JDFU00131 ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡಿ ಅರ್ಜಿದಾರರು ಮೀನುಗಾರಿಕೆ ಮಾಡಲು ಅನುಕೂಲ ಮಾಡಿಕೊಡಲಾಗಿರುತ್ತದೆ.

---

ಸಂಖ್ಯೆ: ಪಸಂಮೀ ಇ-220 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು